impact
www.impactmeasurement.co.in

Sanjevani

Bangalore - Mar 24, 2019

Page No: 7
Page Name: n.a.
Size: 192 sq. cm
AVE: INR 7,100
Type: Newspaper
Language: Kannada
Circulation: 250,000
Frequency: Daily

News monitored for: Lemon Tree Hotels
Title: Govt is giving importance to disabled people development

# ಅಂಗವಿಕಲರ ಅಭಿವೃದ್ಧಿಗೆ ಸರ್ಕಾರ ಆದ್ಯತೆ

ಬೆಂಗಳೂರು,ಮಾ.24– ಅಂಗವಿಕಲರ ಅಭಿವೃದ್ಧಿಗಾಗಿ ಸರ್ಕಾರ ಹಲವು ಯೋಜನೆಗಳು ಕಾರ್ಯಕ್ರಮಗಳನ್ನು ರೂಪಿಸಿದ್ದು ಅವುಗಳಸದುಪಯೋಗವಾಗಬೇಕಾಗಿದೆ ಎಂದು ಅಂಗವಿಕಲರ ರಾಜ್ಯ ಆಯುಕ್ತರಾದ ವಿ.ಎಸ್.ಬಸವರಾಜು ಅವರು ತಿಳಿಸಿದ್ದಾರೆ.

ಅಂಗವಿಕಲರು ಸ್ವಾಭಿಮಾನದಿಂದ ಬದುಕು ಸಾಗಿಸಬೇಕು ಎನ್ನುವುದು ಸರ್ಕಾರದಗುರಿಯಾಗಿದೆಅಂಗವಿಕಲರಿಗೆ ಸ್ವಯಂ ಉದ್ಯೋಗ ಒದಗಿಸಲು ಸೌಲಭ್ಯ ಸರ್ಕಾರಿ ಹುದ್ದೆಗಳಲ್ಲಿ ಮೀಸಲಾತಿ ಸೇರಿದಂತೆ ಹಲವು ಯೋಜನೆಗಳನ್ನು ಜಾರಿಗೆತರಲಾಗಿದೆ ಎಂದರು.ಕಾರ್ಪೊರೇಟ್ ವಲಯದ 50ಕ್ಕೂಹೆಚ್ಚುಪ್ರತಿನಿಧಿಗಳುಅಮೆರಿಕನ್ ಇಂಡಿಯಾ ಫೌಂಡೇಷನ್(ಎಐಎಫ್) ಆಯೋಜಿಸಿದ್ದ ಉದ್ಯೋಗದಾತರನ್ನು ಸಂವೇದನಾಶೀಲರನ್ನಾಗಿಸುವ ವಿಚಾರ ಸಂಕಿರಣದಲ್ಲಿಭಾಗವಹಿಸಿಮಾತನಾಡಿದ ಅವರು ಎಲ್ಲ ಕ್ಷೇತ್ರಗಳಲ್ಲಿಯಲ್ಲಿಯೂ ಅಂಗವಿಕಲರು ತೊಡಗುವಂತೆ ನೋಡಿಕೊಳ್ಳಲಾಗುತ್ತಿದೆ ಎಂದು ತಿಳಿಸಿದರು.

ಎಐಎಫ್‌ನ ದೇಶೀಯ ನಿರ್ದೇಶಕ ಮ್ಯಾಥ್ಯೂ ಜೋಸೆಫ್ ಅವರು ಮಾತನಾಡಿ 'ಶೇ.2ರಷ್ಟು ದಿವ್ಯಾಂಗರು ಮಾತ್ರ ಉದ್ಯೋಗ ಪಡೆದ ದೇಶದಲ್ಲಿ ಎಐಎಫ್ ಭಾರತದಲ್ಲಿ ದಿವ್ಯಾಂಗರಿಗೆ ಸಮಾನ ಅವಕಾಶ ಮತ್ತು ಉದ್ಯೋಗಾವಕಾಶ ನೀಡುವ ಮೂಲಕ ಉದ್ಯಮದ ವ್ಯವಸ್ಥೆಯನ್ನು ಸಂಚಲನಗೊಳಿಸುತ್ತಿದೆ.ಕಾರ್ಪೊರೇಟ್ ವಲಯದ ಭಾಗವಹಿಸುವಿಕೆ ಪಿಡಬ್ಲ್ಯೂಡಿಗಳ ಅದರಲ್ಲಿಯೂ ಮಹಿಳೆಯರ ಸೇರ್ಪಡೆ ಬಹಳ ಮುಖ್ಯವಾಗಿದೆ" ಎಂದರು.


ನಗರದಲ್ಲಿ ನಡೆದ ಅಂಗವಿಕಲರ ಕುರಿತ ವಿಚಾರ ಸಂಕಿರಣದಲ್ಲಿ ಅಂಗವಿಕಲರ ರಾಜ್ಯ ಆಯುಕ್ತರಾದ ವಿ.ಎಸ್.ಬಸವರಾಜು ಎಂಎಫ್‌ಸಿಸ್‌ನ ಮುಖ್ಯಸ್ಥರಾದ ಮೀನು ಭಂಭಾನಿ,ಡೈವರ್ಸಿಟಿ ಅಂಡ್ ಈಕ್ವಲ್ ಆಪರ್ಚುನಿಟಿ ಸೆಂಟರ್ ನಿರ್ದೇಶಕರಾದ ರಾಮಾಚಾರಿ ಅವರು ಪಾಲ್ಗೊಂಡಿದ್ದರು

ತಾರ್ಸಾಡಿಯಾ ಫೌಂಡೇಷನ್– ಯುಎಸ್‌ಎ ಮತ್ತು ಬೋಸ್ಟನ್‌ನ ಸರ್ಕಲ್ ಆಫ್ ಹೋಪ್ ಮೂಲಕ ಎಐಎಫ್ ಭಾರತದಲ್ಲಿ ದಿವ್ಯಾಂಗರನ್ನು ಉದ್ಯೋಗಪಡೆಯಲ್ಲಿ ಸೇರ್ಪಡೆ ಮಾಡಿಕೊಳ್ಳುವ ಮತ್ತು ದೊಡ್ಡ ಸಮುದಾಯಗಳಲ್ಲಿ ವಿಕಲತೆಗಳನ್ನು ಒಪ್ಪಿಕೊಳ್ಳುವ ಕುರಿತು ಶ್ರಮಿಸುತ್ತದೆ.

ಕಾರ್ಯಕ್ರಮದಲ್ಲಿ ಎಂಎಫ್‌ಸಿಸ್‌ನ ಮುಖ್ಯಸ್ಥರಾದ ಮೀನು ಭಂಭಾನಿ, ಡೈವರ್ಸಿಟಿ ಅಂಡ್ ಈಕ್ವಲ್ ಆಪರ್ಚುನಿಟಿ ಸೆಂಟರ್ ನಿರ್ದೇಶಕರಾದ ರಾಮಾಚಾರಿ, ಲೆಮನ್ ಟ್ರೀ ಹೋಟೆಲ್ಸ್‌ನ ಜನರಲ್ ಮ್ಯಾನೇಜರ್ ಬಿಪೇಂದ್ರ ಗುಪ್ತಾ ಮತ್ತು ಅಕ್ಸೆಂಚರ್‌ನ ಜ್ಯೋತಿ ಗಣಪತಿ ಉಪಸ್ಥಿತರಿದ್ದರು.



© Sanjevani